ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್.

...ಡ್ [illegible] ನಂ [illegible] ಕಆರ್ ಎನ್ ಎಸ್ [illegible] 19

3ನೇ ವರ್ಷ [illegible]6ನೇ ಸಂಚಿಕೆ ಕೊಪ್ಪ 9-6-1985 ಭಾನುವಾರ ಬೆಲೆ 20 ಪೈಸೆ

ಮಾಮ್ಕೋಸ್‌ನಿಂದ ಕೊಳೆ ಔಷಧಿ ಹಂಚಿಕೆ

ಶಿವಮೊಗ್ಗ: ಇಲ್ಲಿನ 'ಮ್ಯಾಮ್‌ಕೋಸ್' ಸಂಸ್ಥೆಯು ಅಡಿಕೆ ಬೆಳೆಯ ರಕ್ಷಣೆಯ ದೃಷ್ಟಿಯಿಂದ ಒಳ್ಳೆಯ ಗುಣಮಟ್ಟದ ಮೈಲುತುತ್ತ, ಸುಣ್ಣ ಮತ್ತು ರಾಳವನ್ನು ಸಂಗ್ರಹಿಸಿದ್ದು, ತನ್ನ ಎಲ್ಲಾ ಶಾಖೆ ಮತ್ತು ಏಜನ್ಸಿಗಳ ಮೂಲಕ ಮಾರಾಟಕ್ಕೆ ವ್ಯವಸ್ಥೆ ಮಾಡಿದ್ದಾರೆ.

ಮೈಲುತುತ್ತ ಕಿಲೋಗೆ 16-50, ರಾಳದ ಪಾಕ ಕಿಲೋಗೆ 13-00 ರೂ. ಮತ್ತು ಟಲ್ಫ್ ಸುಣ್ಣ ಕಿಲೋಗೆ 2-10 ರಂತೆ ಮಾರಲಾಗುತ್ತದೆಯೆಂದು ಮ್ಯಾಮ್‌ಕೋಸ್ ಪ್ರಕಟಣೆಯೊಂದು ತಿಳಿಸಿದೆ.

ಶಿವಮೊಗ್ಗ ಅಡಿಕೆ ಪೇಟೆ

ತಾರೀಕು: 7-6-1985

ಸರಕು: 2600 – 3001

ಬೆಟ್ಟೆ: 2100 – 2400

ಗೊರಬಲು: 1539 – 1821

ಸಕಲೇಶಪುರ ಏಲಕ್ಕಿ ಧಾರಣೆ

ವ್ಯಾಪಾರದ ತಾರೀಕು	ಗರಿಷ್ಠ ಧಾರಣೆ	ಸರಾಸರಿ ಧಾರಣೆ
21.5.85	282	200
22.5.85	268	133
23.5.85	185	133
24.5.85	316	158

ಚುನಾವಣಾಪೂರ್ವ ಘೋಷಣೆ ಕಾರ್ಯಗತಗೊಳಿಸುವಲ್ಲಿ ಸರ್ಕಾರದ ವೈಫಲ್ಯ:

ಸುಸ್ತಿದಾರರಾದ ಮಾಜಿ ಗೇಣಿದಾರರು

ಕೊಪ್ಪ: ಭೂಸುಧಾರಣೆ ಕಾನೂನಿನನ್ವಯ ಭೂಮಿ ಪಡೆದ, 10 ಸಾವಿರ ರೂ.ಗಿಂತ ಕಡಿಮೆ ಆದಾಯವಿರುವ ಗೇಣಿದಾರರು ಕಟ್ಟಬೇಕಾಗಿದ್ದ ಪರಿಹಾರದ ಕಂತುಗಳನ್ನು ಮನ್ನಾ ಮಾಡಿರುವುದಾಗಿ ಕಳೆದ ವರ್ಷ ರಾಜ್ಯಸರ್ಕಾರ ನೀಡಿದ ಹೇಳಿಕೆ ಕಾರ್ಯರೂಪಕ್ಕೆ ಬಾರದೆ ರೈತ ಸಮೂಹ ವಿಡಂಬನೆಗೊಳಗಾಗಿದೆ.

ಇಂಥ ಗೇಣಿದಾರ ರೈತರಲ್ಲಿ ಹೆಚ್ಚಿನವರು ಭೂ ಅಭಿವೃದ್ಧಿ ಬ್ಯಾಂಕಿಗೆ ಕಂತು ಕಟ್ಟಬೇಕಾಗಿದ್ದು, **ಸರ್ಕಾರ "ಹೇಳಿದ್ದನ್ನು" ಸತ್ಯವೆಂದೇ ಭ್ರಮಿಸಿದ** ಅವರೆಲ್ಲ ಬ್ಯಾಂಕಿಗೆ ಕಂತು ಕಟ್ಟಿಲ್ಲ. ಆದರೆ ಅಂಥ ಯಾವುದೇ ಆದೇಶವೂ ಹೊರಡದಿದ್ದುದರಿಂದ ಅವರೆಲ್ಲ ಈಗ ಸುಸ್ತಿದಾರರಾಗಿದ್ದಾರೆ.

ಇವರೆಲ್ಲ ಸಾಮಾನ್ಯವಾಗಿ ಡಿಸೆಂಬರ್ ಒಳಗೇ ಕಂತು ಕಟ್ಟಿಬಿಡುತ್ತಿದ್ದ ಕರಾರುವಾಕ್ ಪಾವ್ತಿದಾರರಾಗಿದ್ದರು. ಆದರೆ ಈ ವರ್ಷ ತಮ್ಮ ಕಂತು ಉಳಿಸಿಕೊಂಡ ಈ ಬಡವರ್ಗದ ಜನ ಮುಂದಿನ ವರ್ಷ 2 ಕಂತು ಕಟ್ಟಿ 'ಸುಸ್ತಿ' ನಿವಾರಣೆ ಮಾಡಿಕೊಳ್ಳುವುದು ಬಹುಶಃ ಕನಸಿನ ಮಾತು.

ಭೂ ಅಭಿವೃದ್ಧಿ ಬ್ಯಾಂಕುಗಳ ಆರ್ಥಿಕ ವರ್ಷ ಜೂನ್ 30 ಕ್ಕೆ ಮುಗಿಯುವುದಿದ್ದು ಸರ್ಕಾರ ಸೃಷ್ಟಿಸಿದ ಈ ಗೊಂದಲದಿಂದಾಗಿ ಅವು ತಮ್ಮ ಸಾಲ ವಸೂಲಿ ಗುರಿಯನ್ನು ಮುಟ್ಟುವುದಕ್ಕೆ ಬಹಳ ತೊಂದರೆಯಾಗಿದೆ. ಉದಾಹರಣೆಗೆ ಕೊಪ್ಪ ಭೂ ಅಭಿವೃದ್ಧಿ ಬ್ಯಾಂಕಿನ ಒಟ್ಟಾರೆ ವಸೂಲಾತಿಯ ಪ್ರಮಾಣ ಸುಮಾರು ಶೇ. 10 ರಷ್ಟು ಕುಸಿದಿದ್ದು, ಈ ವರ್ಷ ಇತರೆ ಸಾಲಗಳ ವಸೂಲಾತಿಯಲ್ಲಿ ಗಣನೀಯ ಹೆಚ್ಚಳ ಸಾಧಿಸಿದ್ದರೂ ಸಹ ಈ ಕುಸಿತದ ಕಾರಣದಿಂದ ಇನ್ನೂ ಗುರಿ ಮುಟ್ಟುವುದು ಸಾಧ್ಯವಾಗಿಲ್ಲ.

ಈ ವಿಷಯದ ಬಗ್ಗೆ ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರೊಬ್ಬರು ಸಚಿವ ಗೋಪಿಂದ ಗೌಡರನ್ನು ವಿಚಾರಿಸಿದಾಗ ಸರ್ಕಾರದ ಈ ನಿರ್ಧಾರ ಭೂ ಅಭಿವೃದ್ಧಿ ಬ್ಯಾಂಕಿನ ಸಾಲಗಳಿಗೆ ಅನ್ವಯಿಸುವುದಿಲ್ಲವೆಂದು ಹೇಳಿದ್ದಾಗಿ ತಿಳಿದುಬಂದಿದೆ. ಆದರೆ ಈ ಕುರಿತು ಸರ್ಕಾರ ಸಾರ್ವಜನಿಕವಾಗಿ ಪ್ರಕಟಣೆ ನೀಡಲು ಹಿಂಜರಿಯುತ್ತಿರುವಂತೆ ಕಾಣುತ್ತಿದೆ.

ಸರ್ಕಾರ ಕೂಡಲೇ ತನ್ನ ಚುನಾವಣಾಪೂರ್ವ ಘೋಷಣೆಯನ್ನು ಕಾರ್ಯರೂಪಕ್ಕೆ ತರಬೇಕು. ಇಲ್ಲವೇ ಅದು ಸಾಧ್ಯವಾಗದ್ದನ್ನು ಸಾರ್ವಜನಿಕವಾಗಿ ಪ್ರಕಟಿಸಬೇಕು. ಕಷ್ಟದಲ್ಲಿರುವ ರೈತರನ್ನು ನಿರೀಕ್ಷೆಯ ಕತ್ತಲಲ್ಲಿಟ್ಟು ಇಡೀ ಕೃಷಿ ಸಹಕಾರ ವ್ಯವಸ್ಥೆಗೇ ತೊಂದರೆಒಡ್ಡುವುದು ಅಕ್ಷಮ್ಯವಾಗುತ್ತದೆ.

ಎಸ್ಸೆಸ್ಸೆಲ್ಸಿ ಫಲಿತಾಂಶ:

ಕೊಪ್ಪ ಪ್ರೌಢಶಾಲೆಗೆ 48 %

ಕೊಪ್ಪ: ಇಲ್ಲಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಈ ಸಲದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ. 48 ಮಂದಿ ತೇರ್ಗಡೆ ಹೊಂದಿದ್ದಾರೆ. 97 ಮಂದಿ ಪರೀಕ್ಷೆಗೆ ಕಟ್ಟಿದ್ದು, 6 ಜನ ಪ್ರಥಮ ದರ್ಜೆ, 12 ಜನ ದ್ವಿತೀಯ ದರ್ಜೆ ಪಡೆದಿದ್ದಾರೆ.

ಕಳೆದ ವರ್ಷ 105 ಜನ ಕಟ್ಟಿದ್ದು ಕೇವಲ ಶೇ. 36 ಇದ್ದುದು ಈ ವರ್ಷ ಗಣನೀಯವಾಗಿ ಹೆಚ್ಚಿರುವುದು ಅಭಿನಂದನಾರ್ಹ.

ಇದೇ ಊರಿನ ಕಾನ್ವೆಂಟ್ ಪ್ರೌಢಶಾಲೆಯಲ್ಲಿ 62 ಜನ ಪರೀಕ್ಷೆ ಕಟ್ಟಿದ್ದು 21 ಪ್ರಥಮ ದರ್ಜೆ ಸೇರಿದಂತೆ 57 ಜನ ತೇರ್ಗಡೆಯಾಗಿದ್ದು ಶೇ. 92ರ ಫಲಿತಾಂಶ ಬಂದಿದೆ.

ಸಮೀಪದ ಹಿರೇಕೊಡಿಗೆ ಶಾಲೆಗೆ ಶೇ. 81 ಫಲಿತಾಂಶ ಬಂದಿದೆ.

ಯೋಜನೆಸಿದ್ಧಪಡಿಸುವಾಗ ಸ್ಥಳೀಯ ಅನುಭವಿಗಳ ಸಲಹೆ ಸ್ವಾಗತಿಸಿ

ಯಾವುದೇ ಕಾಮಗಾರಿಯ ಬಗ್ಗೆ ಅಧಿಕಾರಿಗಳು ಯೋಜನೆ ತಯಾರಿಸುತ್ತಾರೆ. ಅವರ ನಿರ್ದೇಶನ ಮತ್ತು ಎಸ್ಟಿಮೇಟಿನ ನಿಬಂಧನೆಗಳಂತೆ ಕಂಟ್ರಾಕ್ಟರ್ ಕೆಲಸ ಮಾಡಿಸುತ್ತಾರೆ. ಆದರೆ, ಆ ಸಂದರ್ಭದಲ್ಲಿ ಕೆಲವು ಸಮಸ್ಯೆಗಳು ಉದ್ಭವಿಸಬಹುದು ಅಥವಾ ಅವರಿಗೆ ಇದ್ದ ಯಾವುದೋ ಸೌಕರ್ಯಗಳು ಕಡಿದುಹೋಗಬಹುದು. ಈ ಬಗ್ಗೆ ಸ್ಥಳೀಯರು ಕೊಡುವ ಸಲಹೆಗಳು, ಮಾಡುವ ಮನವಿಗಳನ್ನು ಅಧಿಕಾರಿಗಳು ಸಾಮಾನ್ಯವಾಗಿ ಉಪೇಕ್ಷೆ ಮಾಡುವುದೇ ಹೆಚ್ಚು. ಕಡೆಗೆ ಕೆಲಸವೆಲ್ಲ ಮುಗಿದು ಸಮಸ್ಯೆ ಪೂರ್ಣ ರೂಪು ಪಡೆದಾಗ ಅದರ ನಿವಾರಣೆಗೆ ಹೊಸದಾಗಿ ಹಣ, ಸಮಯ ಎಲ್ಲ ದಂಡವಾಗುತ್ತದೆ ಅಥವಾ ಸಮಸ್ಯೆ ಹಾಗೇ ಉಳಿದು ಹೋಗುತ್ತದೆ.

ಆದ್ದರಿಂದಲೇ, ಯಾವುದೇ ಕಾಮಗಾರಿಯ ವೇಳೆ ಅಲ್ಲಿನ ಗ್ರಾಮ ಪಂಚಾಯ್ತಿ ಸದಸ್ಯರು ಅಥವಾ ಪುರಸಭೆ ಪ್ರತಿನಿಧಿಗಳು ಮತ್ತು ಸ್ಥಳೀಯ ಅನುಭವಿಗಳೊಂದಿಗೆ ಚರ್ಚಿಸಿ, ಅಲ್ಲಿನ ವಿಶಿಷ್ಟ ಪರಿಸ್ಥಿತಿಯ ಬಗ್ಗೆ ಮಾಹಿತಿಗಳನ್ನೂ ಸಮಸ್ಯೆಗಳು ಉದ್ಭವಿಸದಂತೆ ಸಲಹೆಗಳನ್ನೂ ತೆಗೆದುಕೊಳ್ಳಬೇಕೆಂದು ಅನುಭವಿಗಳು ಒತ್ತಾಯಿಸುವುದು. ಆದರೆ ಇದನ್ನು ಕೂಡ ಉಪೇಕ್ಷೆ ಮಾಡಲಾಗುತ್ತದೆ.

ಇಂಥ ಪರಿಸ್ಥಿತಿಗೆ ಒಂದು ಉತ್ತಮ ಉದಾಹರಣೆ ಕಲ್ಕೆರೆ ಸೇತುವೆಯಿಂದುಂಟಾದ ನೀರಿನ ಕಾಲುವೆಯ ಸಮಸ್ಯೆ. ಅಲ್ಲಿನ ರೈತರು ಆರಂಭದಿಂದಲೂ ವಿವರಿಸಿದ ಸಮಸ್ಯೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ತಪ್ಪು ತಪ್ಪು ಕಲ್ಪನೆಗಳನ್ನು ಸೃಷ್ಟಿಸಿಕೊಂಡ ಪರಿಣಾಮವಾಗಿ ಉಂಟಾದ ಈ ಸಮಸ್ಯೆ ನಿವಾರಣೆಗೆ ಈಗ ಇನ್ನೊಂದು ಆರೆಂಟು ಸಾವಿರ ರೂ. ಗಳ ವೆಚ್ಚ ಸರ್ಕಾರಕ್ಕೆ ಹೆಚ್ಚಾಗಲಿದೆ.

ಅದೂ ಸಹ ನರಸಿಂಹ ಹೇರಳೆಯವರಂಥ ಹಿರಿಯ ರಾಜಕಾರಣಿ, ವ್ಯವಹಾರ ಬಲ್ಲ ಅನುಭವಿ ಮುಖಂಡರ ಜಮೀನೂ ಈ ಸಮಸ್ಯೆಗೆ ಸಿಕ್ಕಿ ಅವರು ಎಲ್ಲಾ ರೈತರ ಪರವಾಗಿ ಅಧಿಕಾರಿಗಳ, ಮಂತ್ರಿಗಳ ಬೆನ್ನು ಹತ್ತಿದ್ದಕ್ಕೆ ಇಷ್ಟಾದರೂ ಸಾಧ್ಯವಾಗಿದೆ. ಅದಿಲ್ಲದೆ, ಸಂತ್ರಸ್ತರೆಲ್ಲ ರಾಜಕೀಯ ಗೊತ್ತಿಲ್ಲದವರೂ, ಬಾಯಿ-ಬರಹ ಇಲ್ಲದವರೂ ಆಗಿರುತ್ತಿದ್ದರೆ ಅವರ ಬಾಳಿಗೆ ಈ ಸೇತುವೆ ಕಲ್ಲು ಹಾಕುತ್ತಿತ್ತಲ್ಲವೆ?

ನಮ್ಮ ಹಳ್ಳಿಯಲ್ಲೂ ಇಂಥದೇ ಒಂದು ಪರಿಸ್ಥಿತಿ ಉದ್ಭವಿಸಿ ಶಾಶ್ವತಗೊಂಡಿದೆ. ಅತ್ಯಂತ ದುರ್ಗಮವಾದ ನಮ್ಮ ಹಳ್ಳಿಯ ಪಂಚಾಯ್ತಿ ರಸ್ತೆಗೆ (6 ಕಿ.ಮೀ. ದೂರ) ಈಗ್ಗೆ ನಾಲ್ಕೈದು ವರ್ಷ ಹಿಂದೆ 27 ಮೋರಿಗಳು ಮಂಜೂರಾಗಿ ಕೆಲಸ ಶುರುವಾಗಿತ್ತು. ಐದಾರು ಮೋರಿಗಳ ನಿರ್ಮಾಣವೂ ಆಗಿತ್ತು. ಆದರೆ, ಮೋರಿಗಳ ಜಾಗ ಗುರ್ತಿಸಿದ್ದು ಸಮರ್ಪಕವಾಗಿರಲಿಲ್ಲ. ಮಳೆಗಾಲದಲ್ಲಿ ರಸ್ತೆಯ ಮೇಲೆ ನೀರು ನುಗ್ಗುವ ಕೆಲವು ಜಾಗಗಳನ್ನು ಬಿಟ್ಟು, ಕೆಲವೆಡೆ ಅಷ್ಟು ಅಗತ್ಯ-ಉಪಯುಕ್ತವಲ್ಲದ ಜಾಗಗಳಲ್ಲಿ ಗುರ್ತು ಮಾಡಲಾಗಿತ್ತು. ಆದ್ದರಿಂದ ಸ್ಥಳೀಯ ಅನುಭವಿಗಳ ನೆರವಿನಿಂದ ಪುನಃ ಗುರ್ತು ಮಾಡಬೇಕು, ಅಲ್ಲದೆ ಕೆಲವು ಮೋರಿಗಳನ್ನು ಕಮ್ಮಿ ಮಾಡಬಹುದು—ಎಂದು ನಮ್ಮ ಊರವರು ಲೋ॥ ಇಲಾಖೆಗೆ ಬರೆದರು.

ಆಗ ಕೊಪ್ಪದಲ್ಲಿ ಆ ಇಲಾಖೆಯ ಅಧಿಕಾರಿಯಾಗಿದ್ದ ಬಾಲಕೃಷ್ಣ ಅವರನ್ನು ಊರವರ ಪರವಾಗಿ ನಾನೇ ಭೇಟಿಮಾಡಿದ್ದೆ. ಆದರೆ ಅವರು, ನಾವು ಹಾಗೆ ಪತ್ರ ಬರೆದದ್ದೇ ತಪ್ಪು ಎಂಬಂತೆ ಮೊದಲಿಗೆ ವರ್ತಿಸಿದರು. "ನಮ್ಮ ಇಂಜಿನಿಯರ್‌ಗಿಂತ ನಿಮ್ಮ ಹಳ್ಳಿಗರಿಗೆ ಹೆಚ್ಚು ಗೊತ್ತಿರುತ್ತೇನ್ರಿ?" ಎಂದರು. ಆದರೆ ನಾನು ಪಟ್ಟು ಬಿಡದೆ ವಾದಿಸಿದ್ದಲ್ಲದೆ, ಅವರು ಸ್ಥಳಕ್ಕೆ ಬಂದರೆ ಅವರ ಇಂಜಿನಿಯರ್‌ಗೆ ಎಷ್ಟು ಗೊತ್ತು ಅಥವಾ ಎಷ್ಟು ಜವಾಬ್ದಾರಿಯಿಂದ ಅವರು ಕೆಲಸಮಾಡಿದ್ದಾರೆ ಎಂಬುದನ್ನು ತೋರಿಸುವುದಾಗಿ ಹೇಳಿದಾಗ ಅವರು ನಮ್ಮ ವಾದವನ್ನು ಒಪ್ಪಿಕೊಂಡು, ಖಚಿತ ಪರಿಶೀಲನೆ ನಡೆಸುವುದಾಗಿ ಭರವಸೆ ಕೊಟ್ಟರು. ಅನಂತರ ಸ್ಥಳಕ್ಕೆ ಬಂದು ಕೆಲವು ಮೋರಿಗಳನ್ನು ಪರೀಕ್ಷೆ ಮಾಡಿ, ಕಳಪೆಯಾಗಿ ಕಟ್ಟಿದ್ದ ಒಂದು ಮೋರಿ ಒಡೆಸಿ, ಪುನಃ ಕಟ್ಟಲೂ ಆದೇಶಿಸಿದರಂತೆ.

ಅಷ್ಟೇ ಸಾಧನೆ ಆದದ್ದು. ಅನಂತರ ಇಡೀ ಕೆಲಸವೇ ನಿಂತು ಹೋಗಿ, **ಬಂದಿದ್ದ ಹಣವೂ ಹಿಂದಕ್ಕೆ ಹೋಯಿತು.** ಈಗಲೂ ರಾಜ್ಯ ಮಂತ್ರಿಮಂಡಲ ಮನಸ್ಸು ಮಾಡಿದರೆ ಅದನ್ನು ಪುನಃ ಮಂಜೂರು ಮಾಡಬಹುದೆಂದು ಹೇಳಲಾಗಿದೆ. ಈ ಬಗ್ಗೆ [illegible]ವಿಂದ ಗೌಡರಿಗೆ ಮೂರು ವರ್ಷದಿಂದ ಪದೇ ಪದೇ ತಿಳಿಸಿದರೂ ಪ್ರಯೋಜನವಾಗಿಲ್ಲ. ಅಕಸ್ಮಾತ್ ಮಂಜೂರಾಗಿದ್ದ ಒಂದು ಕಾರ್ಯವೂ ಸಹ, ಅದು ಪೋಲಾಗದಂತೆ ಜನ ಜಾಗ್ರತೆ ವಹಿಸಲು ಹೋದ 'ತಪ್ಪಿಗೆ' ಇಲ್ಲವೇ ಆಗಿಹೋಯಿತು. ಅದೇ ಕೆಲಸವನ್ನು ಅಕಸ್ಮಾತ್ ಪುನಃ ಮಾಡಿಸುವುದಾದರೂ ಆಗಿಗಿಂತ ಈಗ [illegible] ಹೆಚ್ಚು [illegible] ಸಾವಿರ ರೂ. ಹೆಚ್ಚಿಗೆ ಬೇಕಾಗಬಹುದು.

ಅಧಿಕಾರಿಗಳು ಸ್ವಲ್ಪವಾದರೂ ಇಂಥ ಸ್ಥಳೀಯ ಅನುಭವಕ್ಕೆ ಬೆಲೆ ಕೊಡುವುದರಿಂದ ಖಂಡಿತ ಅವರ ಕೆಲಸ [illegible]ವಿಲ್ಲ. ಜನರಿಗೆ [illegible] ಪ್ರಯೋಜನವೂ ಹೆಚ್ಚುತ್ತದೆ.

—ಸಿರಿಮನೆ ನಾಗರಾಜ್.

ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್.

[illegible] ಕೆಆರ್ ಎನ್ ಎಸ್ 19

3ನೇ ವರ್ಷ 36ನೇ ಸಂಚಿಕೆ ಕೊಪ್ಪ 9-6-1985 ಭಾನುವಾರ ಬೆಲೆ 20 ಪೈಸೆ

ಮ್ಯಾಮ್ಕೋಸ್‌ನಿಂದ ಕೊಳೆ ಔಷಧಿ ಹಂಚಿಕೆ

ಶಿವಮೊಗ್ಗ: ಇಲ್ಲಿನ 'ಮ್ಯಾಮ್ ಕೋಸ್' ಸಂಸ್ಥೆಯು ಅಡಿಕೆ ಬೆಳೆಯ ರಕ್ಷಣೆಯ ದೃಷ್ಟಿಯಿಂದ ಒಳ್ಳೆಯ ಗುಣಮಟ್ಟದ ಮೈಲುತುತ್ತ, ಸುಣ್ಣ ಮತ್ತು ರಾಳವನ್ನು ಸಂಗ್ರಹಿಸಿದ್ದು, ತನ್ನ ಎಲ್ಲಾ ಶಾಖೆ ಮತ್ತು ಏಜನ್ಸಿಗಳ ಮೂಲಕ ಮಾರಾಟಕ್ಕೆ ವ್ಯವಸ್ಥೆ ಮಾಡಿದ್ದಾರೆ.

ಮೈಲುತುತ್ತ ಕಿಲೋಗೆ 16-50, ರಾಳದ ಪಾಕ ಕಿಲೋಗೆ 13-00 ರೂ. ಮತ್ತು ಟಲ್ಫ ಸುಣ್ಣ ಕಿಲೋಗೆ 2-10 ರಂತೆ ಮಾರಲಾಗುತ್ತದೆಯೆಂದು ಮ್ಯಾಮ್ ಕೋಸ್ ಪ್ರಕಟಣೆಯೊಂದು ತಿಳಿಸಿದೆ.

ಶಿವಮೊಗ್ಗ ಅಡಿಕೆ ಪೇಟೆ

ತಾರೀಕು: 7-6-1985

ಸರಕು: 2600 – 3001

ಬೆಟ್ಟೆ: 2100 – 2400

ಗೊರಬಲು: 1539 – 1821

ಸಕಲೇಶಪುರ ಏಲಕ್ಕಿ ಧಾರಣೆ

ವ್ಯಾಪಾರದ ತಾರೀಕು	ಗರಿಷ್ಠ ಧಾರಣೆ	ಸರಾಸರಿ ಧಾರಣೆ
21.5.85	282	200
22.5.85	268	133
23.5.85	185	133
24.5.85	316	158

ಚುನಾವಣಾಪೂರ್ವ ಘೋಷಣೆ ಕಾರ್ಯಗತಗೊಳಿಸುವಲ್ಲಿ ಸರ್ಕಾರದ ವೈಫಲ್ಯ:

ಸುಸ್ತಿದಾರರಾದ ಮಾಜಿ ಗೇಣಿದಾರರು

ಕೊಪ್ಪ: ಭೂಸುಧಾರಣೆ ಕಾನೂನಿನನ್ವಯ ಭೂಮಿ ಪಡೆದ, 10 ಸಾವಿರ ರೂ.ಗಿಂತ ಕಡಿಮೆ ಆದಾಯವಿರುವ ಗೇಣಿದಾರರು ಕಟ್ಟಬೇಕಾಗಿದ್ದ ಪರಿಹಾರದ ಕಂತುಗಳನ್ನು ಮನ್ನಾ ಮಾಡಿರುವುದಾಗಿ ಕಳೆದ ವರ್ಷ ರಾಜ್ಯಸರ್ಕಾರ ನೀಡಿದ ಹೇಳಿಕೆ ಕಾರ್ಯರೂಪಕ್ಕೆ ಬಾರದೆ ರೈತ ಸಮೂಹ ವಿವಂಚನೆಗೊಳಗಾಗಿದೆ.

ಇಂಥ ಗೇಣಿದಾರ ರೈತರಲ್ಲಿ ಹೆಚ್ಚಿನವರು ಭೂ ಅಭಿವೃದ್ಧಿ ಬ್ಯಾಂಕಿಗೆ ಕಂತು ಕಟ್ಟಬೇಕಾಗಿದ್ದು, **ಸರ್ಕಾರ "ಹೇಳಿದ್ದನ್ನು" ಸತ್ಯವೆಂದೇ ಭ್ರಮಿಸಿದ** ಅವರೆಲ್ಲ ಬ್ಯಾಂಕಿಗೆ ಕಂತು ಕಟ್ಟಿಲ್ಲ. ಆದರೆ ಅಂಥ ಯಾವುದೇ ಆದೇಶವೂ ಹೊರಡದಿದ್ದುದರಿಂದ ಅವರೆಲ್ಲ ಈಗ ಸುಸ್ತಿದಾರರಾಗಿದ್ದಾರೆ.

ಇವರೆಲ್ಲ ಸಾಮಾನ್ಯವಾಗಿ ಡಿಸೆಂಬರ್ ಒಳಗೇ ಕಂತು ಕಟ್ಟಿಬಿಡುತ್ತಿದ್ದ ಕರಾರುವಾಕ್ ಪಾವತಿದಾರರಾಗಿದ್ದರು. ಆದರೆ ಈ ವರ್ಷ ತಮ್ಮ ಕಂತು ಉಳಿಸಿಕೊಂಡ ಈ ಬಡವರ್ಗದ ಜನ ಮುಂದಿನ ವರ್ಷ 2 ಕಂತು ಕಟ್ಟಿ 'ಸುಸ್ತಿ' ನಿವಾರಣೆ ಮಾಡಿಕೊಳ್ಳುವುದು ಬಹುಶಃ ಕನಸಿನ ಮಾತು.

ಭೂ ಅಭಿವೃದ್ಧಿ ಬ್ಯಾಂಕುಗಳ ಆರ್ಥಿಕ ವರ್ಷ ಜೂನ್ 30 ಕ್ಕೆ ಮುಗಿಯುವುದಿದ್ದು ಸರ್ಕಾರ ಸೃಷ್ಟಿಸಿದ ಈ ಗೊಂದಲದಿಂದಾಗಿ ಅವು ತಮ್ಮ ಸಾಲ ವಸೂಲಿ ಗುರಿಯನ್ನು ಮುಟ್ಟುವುದಕ್ಕೆ ಬಹಳ ತೊಂದರೆಯಾಗಿದೆ. ಉದಾಹರಣೆಗೆ ಕೊಪ್ಪ ಭೂ ಅಭಿವೃದ್ಧಿ ಬ್ಯಾಂಕಿನ ಒಟ್ಟಾರೆ ವಸೂಲಾತಿಯ ಪ್ರಮಾಣ ಸುಮಾರು ಶೇ. 10 ರಷ್ಟು ಕುಸಿದಿದ್ದು, ಈ ವರ್ಷ ಇತರೆ ಸಾಲಗಳ ವಸೂಲಾತಿಯಲ್ಲಿ ಗಣನೀಯ ಹೆಚ್ಚಳ ಸಾಧಿಸಿದ್ದರೂ ಸಹ ಈ ಕುಸಿತದ ಕಾರಣದಿಂದ ಇನ್ನೂ ಗುರಿ ಮುಟ್ಟುವುದು ಸಾಧ್ಯವಾಗಿಲ್ಲ.

ಈ ವಿಷಯದ ಬಗ್ಗೆ ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರೊಬ್ಬರು ಸಚಿವ ಗೋಪಿಂದ ಗೌಡರನ್ನು ವಿಚಾರಿಸಿದಾಗ ಸರ್ಕಾರದ ಈ ನಿರ್ಧಾರ ಭೂ ಅಭಿವೃದ್ಧಿ ಬ್ಯಾಂಕಿನ ಸಾಲಗಳಿಗೆ ಅನ್ವಯಿಸುವುದಿಲ್ಲವೆಂದು ಹೇಳಿದ್ದಾಗಿ ತಿಳಿದುಬಂದಿದೆ. ಆದರೆ ಈ ಕುರಿತು ಸರ್ಕಾರ ಸಾರ್ವಜನಿಕವಾಗಿ ಪ್ರಕಟಣೆ ನೀಡಲು ಹಿಂಜರಿಯುತ್ತಿರುವಂತೆ ಕಾಣುತ್ತಿದೆ.

ಸರ್ಕಾರ ಕೂಡಲೇ ತನ್ನ ಚುನಾವಣಾಪೂರ್ವ ಘೋಷಣೆಯನ್ನು ಕಾರ್ಯರೂಪಕ್ಕೆ ತರಬೇಕು. ಇಲ್ಲವೇ ಅದು ಸಾಧ್ಯವಾಗದ್ದನ್ನು ಸಾರ್ವಜನಿಕವಾಗಿ ಪ್ರಕಟಿಸಬೇಕು. ಕಷ್ಟದಲ್ಲಿರುವ ರೈತರನ್ನು ನಿರೀಕ್ಷೆಯ ಕತ್ತಲಲ್ಲಿಟ್ಟು ಇಡೀ ಕೃಷಿ ಸಹಕಾರ ವ್ಯವಸ್ಥೆಗೇ ತೊಂದರೆಒಡ್ಡುವುದು ಅಕ್ಷಮ್ಯವಾಗುತ್ತದೆ.

ಎಸ್ಸೆಸ್ಸೆಲ್ಸಿ ಫಲಿತಾಂಶ:

ಕೊಪ್ಪ ಪ್ರೌಢಶಾಲೆಗೆ 48 %

ಕೊಪ್ಪ: ಇಲ್ಲಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಈ ಸಲದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ. 48 ಮಂದಿ ತೇರ್ಗಡೆ ಹೊಂದಿದ್ದಾರೆ. 97 ಮಂದಿ ಪರೀಕ್ಷೆಗೆ ಕಟ್ಟಿದ್ದು, 6 ಜನ ಪ್ರಥಮ ದರ್ಜೆ, 12 ಜನ ದ್ವಿತೀಯ ದರ್ಜೆ ಪಡೆದಿದ್ದಾರೆ.

ಕಳೆದ ವರ್ಷ 105 ಜನ ಕಟ್ಟಿದ್ದು ಕೇವಲ ಶೇ. 36 ಇದ್ದುದು ಈ ವರ್ಷ ಗಣನೀಯವಾಗಿ ಹೆಚ್ಚಿರುವುದು ಅಭಿನಂದನಾರ್ಹ.

ಇದೇ ಊರಿನ ಕಾನ್ವೆಂಟ್ ಪ್ರೌಢಶಾಲೆಯಲ್ಲಿ 62 ಜನ ಪರೀಕ್ಷೆ ಕಟ್ಟಿದ್ದು 21 ಪ್ರಥಮ ದರ್ಜೆ ಸೇರಿದಂತೆ 57 ಜನ ತೇರ್ಗಡೆಯಾಗಿದ್ದು ಶೇ. 92 ರ ಫಲಿತಾಂಶ ಬಂದಿದೆ.

ಸಮೀಪದ ಹಿರೇಕೊಡಿಗೆ ಶಾಲೆಗೆ ಶೇ. 81 ಫಲಿತಾಂಶ ಬಂದಿದೆ.

ಯೋಜನೆ ಸಿದ್ಧಪಡಿಸುವಾಗ ಸ್ಥಳೀಯ ಅನುಭವಿಗಳ ಸಲಹೆ ಸ್ವಾಗತಿಸಿ

ಯಾವುದೇ ಕಾಮಗಾರಿಯ ಬಗ್ಗೆ ಅಧಿಕಾರಿಗಳು ಯೋಜನೆ ತಯಾರಿಸುತ್ತಾರೆ. ಅವರ ನಿರ್ದೇಶನ ಮತ್ತು ಎಸ್ಟಿಮೇಟಿನ ನಿಬಂಧನೆಗಳಂತೆ ಕಂಟ್ರಾಕ್ಟರ್ ಕೆಲಸ ಮಾಡಿಸುತ್ತಾರೆ. ಆದರೆ, ಆ ಸಂದರ್ಭದಲ್ಲಿ ಕೆಲವು ಸಮಸ್ಯೆಗಳು ಉದ್ಭವಿಸಬಹುದು ಅಥವಾ ಅವರಿಗೆ ಇದ್ದ ಯಾವುದೋ ಸೌಕರ್ಯಗಳು ಕಡಿದುಹೋಗಬಹುದು. ಈ ಬಗ್ಗೆ ಸ್ಥಳೀಯರು ಕೊಡುವ ಸಲಹೆಗಳು, ಮಾಡುವ ಮನವಿಗಳನ್ನು ಅಧಿಕಾರಿಗಳು ಸಾಮಾನ್ಯವಾಗಿ ಉಪೇಕ್ಷೆ ಮಾಡುವುದೇ ಹೆಚ್ಚು. ಕಡೆಗೆ ಕೆಲಸವೆಲ್ಲ ಮುಗಿದು ಸಮಸ್ಯೆ ಪೂರ್ಣರೂಪು ಪಡೆದಾಗ ಅದರ ನಿವಾರಣೆಗೆ ಹೊಸದಾಗಿ ಹಣ, ಸಮಯ ಎಲ್ಲ ದಂಡವಾಗುತ್ತದೆ ಅಥವಾ ಸಮಸ್ಯೆ ಹಾಗೇ ಉಳಿದು ಹೋಗುತ್ತದೆ.

ಆದ್ದರಿಂದಲೇ, ಯಾವುದೇ ಕಾಮಗಾರಿಯ ವೇಳೆ ಅಲ್ಲಿನ ಗ್ರಾಮ ಪಂಚಾಯ್ತಿ ಸದಸ್ಯರು ಅಥವಾ ಪುರಸಭೆ ಪ್ರತಿನಿಧಿಗಳು ಮತ್ತು ಸ್ಥಳೀಯ ಅನುಭವಿಗಳೊಂದಿಗೆ ಚರ್ಚಿಸಿ, ಅಲ್ಲಿನ ವಿಶಿಷ್ಟ ಪರಿಸ್ಥಿತಿಯ ಬಗ್ಗೆ ಮಾಹಿತಿಗಳನ್ನೂ ಸಮಸ್ಯೆಗಳು ಉದ್ಭವಿಸದಂತೆ ಸಲಹೆಗಳನ್ನೂ ತೆಗೆದುಕೊಳ್ಳಬೇಕೆಂದು ಅನುಭವಿಗಳು ಒತ್ತಾಯಿಸುವುದು. ಆದರೆ ಇದನ್ನು ಕೂಡ ಉಪೇಕ್ಷೆ ಮಾಡಲಾಗಿದೆ.

ಇಂಥ ಪರಿಸ್ಥಿತಿಗೆ ಒಂದು ಉತ್ತಮ ಉದಾಹರಣೆ ಕಲ್ಕೆರೆ ಸೇತುವೆಯಿಂದುಂಟಾದ ನೀರಿನ ಕಾಲುವೆಯ ಸಮಸ್ಯೆ. ಅಲ್ಲಿನ ರೈತರು ಆರಂಭದಿಂದಲೂ ವಿವರಿಸಿದ ಸಮಸ್ಯೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ತಪ್ಪು ತಪ್ಪು ಕಲ್ಪನೆಗಳನ್ನು ಸೃಷ್ಟಿಸಿಕೊಂಡ ಪರಿಣಾಮವಾಗಿ ಉಂಟಾದ ಈ ಸಮಸ್ಯೆ ನಿವಾರಣೆಗೆ ಈಗ ಇನ್ನೊಂದು ಅರೆಂಟು ಸಾವಿರ ರೂ. ಗಳ ವೆಚ್ಚ ಸರ್ಕಾರಕ್ಕೆ ಹೆಚ್ಚಾಗಲಿದೆ.

ಅದೂ ಸಹ ನರಸಿಂಹ ಹೇರಳೆಯವರಂಥ ಹಿರಿಯ ರಾಜಕಾರಣಿ, ವ್ಯವಹಾರ ಬಲ್ಲ ಅನುಭವಿ ಮುಖಂಡರ ಜಮೀನೂ ಈ ಸಮಸ್ಯೆಗೆ ಸಿಕ್ಕಿ ಅವರು ಎಲ್ಲಾ ರೈತರ ಪರವಾಗಿ ಅಧಿಕಾರಿಗಳ, ಮಂತ್ರಿಗಳ ಬೆನ್ನು ಹತ್ತಿದ್ದಕ್ಕೆ ಇಷ್ಟಾದರೂ ಸಾಧ್ಯವಾಗಿದೆ. ಅದಿಲ್ಲದೆ, ಸಂತ್ರಸ್ತರೆಲ್ಲ ರಾಜಕೀಯ ಗೊತ್ತಿಲ್ಲದವರೂ, ಬಾಯಿ-ಬರಹ ಇಲ್ಲದವರೂ ಆಗಿರುತ್ತಿದ್ದರೆ ಅವರ ಬಾಳಿಗೆ ಈ ಸೇತುವೆ ಕಲ್ಲು ಹಾಕುತ್ತಿತ್ತಲ್ಲವೆ?

ನಮ್ಮ ಹಳ್ಳಿಯಲ್ಲೂ ಇಂಥದೇ ಒಂದು ಪರಿಸ್ಥಿತಿ ಉದ್ಭವಿಸಿ ಶಾಶ್ವತಗೊಂಡಿದೆ. ಅತ್ಯಂತ ದುರ್ಗಮವಾದ ನಮ್ಮ ಹಳ್ಳಿಯ ಪಂಚಾಯ್ತಿ ರಸ್ತೆಗೆ (6 ಕಿ.ಮೀ. ದೂರ) ಈಗ್ಗೆ ನಾಲ್ಕೈದು ವರ್ಷ ಹಿಂದೆ 27 ಮೋರಿಗಳು ಮಂಜೂರಾಗಿ ಕೆಲಸ ಶುರುವಾಗಿತ್ತು. ಐದಾರು ಮೋರಿಗಳ ನಿರ್ಮಾಣವೂ ಆಗಿತ್ತು. ಆದರೆ, ಮೋರಿಗಳ ಜಾಗ ಗುರ್ತಿಸಿದ್ದು ಸಮರ್ಪಕವಾಗಿರಲಿಲ್ಲ. ಮಳೆಗಾಲದಲ್ಲಿ ರಸ್ತೆಯ ಮೇಲೆ ನೀರು ನುಗ್ಗುವ ಕೆಲವು ಜಾಗಗಳನ್ನು ಬಿಟ್ಟು, ಕೆಲವೆಡೆ ಅಷ್ಟು ಆಗತ್ಯ-ಉಪಯುಕ್ತವಲ್ಲದ ಜಾಗಗಳಲ್ಲಿ ಗುರ್ತು ಮಾಡಲಾಗಿತ್ತು. ಆದ್ದರಿಂದ ಸ್ಥಳೀಯ ಅನುಭವಿಗಳ ನೆರವಿನಿಂದ ಪುನಃ ಗುರ್ತು ಮಾಡಬೇಕು, ಅಲ್ಲದೆ ಕೆಲವು ಮೋರಿಗಳನ್ನು ಕಮ್ಮಿ ಮಾಡಬಹುದು—ಎಂದು ನಮ್ಮ ಊರವರು ಲೋ|| ಇಲಾಖೆಗೆ ಬರೆದರು.

ಆಗ ಕೊಪ್ಪದಲ್ಲಿ ಆ ಇಲಾಖೆಯ ಅಧಿಕಾರಿಯಾಗಿದ್ದ ಬಾಲಕೃಷ್ಣ ಅವರನ್ನು ಊರವರ ಪರವಾಗಿ ನಾನೇ ಭೇಟಿಮಾಡಿದ್ದೆ. ಆದರೆ ಅವರು, ನಾವು ಹಾಗೆ ಪತ್ರ ಬರೆದದ್ದೇ ತಪ್ಪು ಎಂಬಂತೆ ಮೊದಲಿಗೆ ವರ್ತಿಸಿದರು. "ನಮ್ಮ ಇಂಜಿನಿಯರ್‌ಗಿಂತ ನಿಮ್ಮ ಹಳ್ಳಿಗರಿಗೆ ಹೆಚ್ಚು ಗೊತ್ತಿರುತ್ತೇನ್ರಿ?" ಎಂದರು. ಆದರೆ ನಾನು ಪಟ್ಟು ಬಿಡದೆ ವಾದಿಸಿದ್ದಲ್ಲದೆ, ಅವರು ಸ್ಥಳಕ್ಕೆ ಬಂದರೆ ಅವರ ಇಂಜಿನಿಯರ್‌ಗೆ ಎಷ್ಟು ಗೊತ್ತು ಅಥವಾ ಎಷ್ಟು ಜವಾಬ್ದಾರಿಯಿಂದ ಅವರು ಕೆಲಸಮಾಡಿದ್ದಾರೆ ಎಂಬುದನ್ನು ತೋರಿಸುವುದಾಗಿ ಹೇಳಿದಾಗ ಅವರು ನಮ್ಮ ವಾದವನ್ನು ಒಪ್ಪಿಕೊಂಡು, ಪರಿಶೀಲನೆ ನಡೆಸುವುದಾಗಿ ಭರವಸೆ ಕೊಟ್ಟರು. ಅನಂತರ ಸ್ಥಳಕ್ಕೆ ಬಂದು ಕೆಲವು ಮೋರಿಗಳನ್ನು ಪರೀಕ್ಷೆ ಮಾಡಿ, ಕಳಪೆಯಾಗಿ ಕಟ್ಟಿದ್ದ ಒಂದು ಮೋರಿ ಒಡೆಸಿ, ಪುನಃ ಕಟ್ಟಲೂ ಆದೇಶಿಸಿದರಂತೆ.

ಅಷ್ಟೇ ಸಾಧನೆ ಆದದ್ದು. ಅನಂತರ ಇಡೀ ಕೆಲಸವೇ ನಿಂತು ಹೋಗಿ, ಬಂದಿದ್ದ ಹಣವೂ **ಹಿಂದಕ್ಕೆ ಹೋಯಿತು.** ಈಗಿನ ರಾಜ್ಯ ಮಂತ್ರಿಮಂಡಲ ಮನಸ್ಸು ಮಾಡಿದರೆ ಅದನ್ನು ಪುನಃ ಮಂಜೂರು ಮಾಡಬಹುದೆಂದು ಹೇಳಲಾಗಿದೆ. ಈ ಬಗ್ಗೆ ಗೋವಿಂದ ಗೌಡರಿಗೆ ಮೂರು ವರ್ಷದಿಂದ ಪದೇ ಪದೇ ತಿಳಿಸಿದರೂ ಪ್ರಯೋಜನವಾಗಿಲ್ಲ. ಅಕಸ್ಮಾತ್ ಮಂಜೂರಾಗಿದ್ದ ಒಂದು [illegible] ರ್ಯವೂ ಸಹ, ಅದು ಫೇಲಾದಂತೆ ಜನ ಜಾಗೃತಿ ವಹಿಸಲು ಹೋದ 'ತಪ್ಪಿಗೆ' ಇಲ್ಲವೇ ಆಗಿಹೋಯಿತು. ಅದೇ ಕೆಲಸವನ್ನು ಅಕಸ್ಮಾತ್ ಪುನಃ ಮಾಡಿಸುವುದಾದರೂ ಆಗಿಗಿಂತ ಈಗ ಮತ್ತೊಂದು ಹತ್ತಿಪ್ಪತ್ತು ಸಾವಿರ ರೂ. ಹೆಚ್ಚಿಗೆ ಬೇಕಾಗಬಹುದು.

ಅಧಿಕಾರಿಗಳು ಸ್ವಲ್ಪವಾದರೂ ಇಂಥ ಸ್ಥಳೀಯ ಅನುಭವಕ್ಕೆ ಬೆಲೆ ಕೊಡುವುದರಿಂದ [illegible] ವುದಿಲ್ಲ. ಜನರಿಗೆ ಅವರಿಂದ [illegible] ಜನವೂ ಹೆಚ್ಚುತ್ತೆ.

—ಸಿರಿಮನೆ ನಾಗರಾಜ್.

ಕಲ್ಕೆರೆ ಹೊಸ ಸೇತುವೆಯಿಂದ ನೀರು ಕಾಲುವೆಗೆ ಧಕ್ಕೆ: ಬದಲಿ ವ್ಯವಸ್ಥೆಗೆ ಅಧಿಕಾರಿಗಳ ಒಪ್ಪಿಗೆ

ಕೊಪ್ಪ: ಈ ತಾಲ್ಲೂಕಿನ ಕಲ್ಕೆರೆಯಲ್ಲಿ ಕಲ್ಕೆರೆ-ಹೆರಜೆಗದ್ದೆ ರಸ್ತೆಯಲ್ಲಿ ನಿರ್ಮಿಸುತ್ತಿರುವ ಸೇತುವೆಯಿಂದಾಗಿ ಆ ಜಾಗದಲ್ಲಿ ಅನಾದಿಯಿಂದ ಇದ್ದ ಹಳ್ಳದ ಕಟ್ಟು ಮತ್ತು ನೀರು ಕಾಲುವೆ ನಾಶವಾಗಿದ್ದು, ಸ್ವಲ್ಪ ಮಾರ್ಪಾಡಿನೊಂದಿಗೆ ಅದನ್ನು ಪುನರ್ನಿರ್ಮಿಸಿ ಕೊಡಲು ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಒಪ್ಪಿಕೊಂಡಿದ್ದಾರೆಂದು ತಿಳಿದುಬಂದಿದೆ.

ಶತಮಾನಕ್ಕೂ ಹಿಂದಿನ ಕಾಲುವೆ

ಈ ಕಟ್ಟು-ಕಾಲುವೆಗಳ ನೆರವಿನಿಂದ 28 ಕುಟುಂಬಗಳಿಗೆ ಸೇರಿದ ಸುಮಾರು 50-60 ಎಕರೆ ಜಮೀನು ಸಾಗುವಳಿ ಆಗಬೇಕಾಗಿದೆ. ಈ ಪೈಕಿ ಬಹಳ ಜನ ಸಣ್ಣ ರೈತರು. ಈ ಕಟ್ಟು-ಕಾಲುವೆ 1910 ರಷ್ಟು ಹಿಂದಿನ ನಕಾಶೆಯಲ್ಲೂ ಸಹ ಕಂಡಿದ್ದು, 100 ವರ್ಷಕ್ಕೂ ಹಿಂದೆ ಕಲ್ಕೆರೆ ಮುಖ್ಯ ರಸ್ತೆಯಲ್ಲಿ ಸೇತುವೆ ಆದಾಗಲೂ ಅದರಲ್ಲಿ ಈ ಕಾಲುವೆಗಾಗಿ ಪ್ರತ್ಯೇಕ ಮೋರಿಯನ್ನು ರಚಿಸಲಾಗಿದೆ. ಈ ನೀರಿಲ್ಲದೆ ಇದಿಷ್ಟು ಜಮೀನಿನಲ್ಲಿ ಒಂದು ಬೆಳೆ ಸಹ ತೆಗೆಯಲಾಗುವುದಿಲ್ಲ.

ಸೇತುವೆಗಾಗಿ ಕಟ್ಟಿನ ಜಾಗವನ್ನು 5 ಅಡಿಯಷ್ಟು ತಗ್ಗಿಸಿದ್ದು, ಕಾಲುವೆ ತುಂಡಾಗಿದೆ. ಅಲ್ಲದೆ, ಸಮೀಪದ ಕೋಣೆಮಕ್ಕಿ ಹಳ್ಳದ ಕಟ್ಟಿನಿಂದಲೂ ಈ ಕಟ್ಟಿಗೆ ಒಂದು ಪಾಲು ನೀರು ಬರುತ್ತಿದ್ದು, ಆ ಕಾಲುವೆ ಸಹ ಮುಚ್ಚಿದೆ.

ಬದಲಿ ವ್ಯವಸ್ಥೆ

ಸೇತುವೆ ಕಟ್ಟುವುದಕ್ಕಾಗಿ ಈಗ ಹಾಕಿಕೊಂಡಿರುವ ಕಟ್ಟನ್ನೇ ಸದ್ಯಕ್ಕೆ ಉಳಿಸಿಕೊಂಡು, ಮೇಲ್ಗಡೆಯ ತೋಟದ ಮೂಲಕ ಒಂದು ಪೈಪು ಹಾಕಿ ನೀರನ್ನು ಕಾಲುವೆಗೆ ತರುವುದು; ಮಳೆ ಕಮ್ಮಿಯಾದೊಡನೆ ಸೇತುವೆಯಿಂದ ಸುಮಾರು 15 ಅಡಿ ಮೇಲ್ಭಾಗಕ್ಕೆ ಕಾಲುವೆ ಮಟ್ಟಕ್ಕೆ ಸರಿಯಾಗಿ ಸಿಮೆಂಟಿನ ಕಟ್ಟೆ ಕಟ್ಟಿಸಿ, ಕಟ್ಟು ಹಾಕಲು ವ್ಯವಸ್ಥೆ ಮಾಡಿಕೊಡುವುದು ಹಾಗೂ ಪೈಪಿನ ಬದಲು ಶಾಶ್ವತ ಸಿಮೆಂಟ್ ಕಾಲುವೆ ಕಟ್ಟಿಸಿ ಕೊಡುವುದು; ಕೋಣೆಮಕ್ಕಿ ಹಳ್ಳದ ನೀರು ಈ ಕಟ್ಟಿಗೆ ಬರಲು ಒಂದು ಪೈಪ್ ಮೂಲಕ ವ್ಯವಸ್ಥೆ ಮಾಡುವುದು— ಈ ವ್ಯವಸ್ಥೆಗೆ ಈಗ ಅಧಿಕಾರಿಗಳು ಒಪ್ಪಿಕೊಂಡಿದ್ದಾರೆ.

ಮಂತ್ರಿ ಗೋವಿಂದಗೌಡರ ಮುತುವರ್ಜಿ ಮತ್ತು ನಿರ್ದೇಶನದಂತೆ ಈ ಒಪ್ಪಂದ ಏರ್ಪಟ್ಟಿದ್ದು, ರೈತರು ಗೋವಿಂದಗೌಡರಿಗೆ ಮೆಚ್ಚುಗೆ ಮತ್ತು ಕೃತಜ್ಞತೆ ಸಲ್ಲಿಸಿದ್ದಾರೆ.

ಮಲೆನಾಡಲ್ಲಿ ಸಣ್ಣ ಕೈಗಾರಿಕೆ ಬಗ್ಗೆ ಪ್ರಬಂಧ ಸ್ಪರ್ಧೆ

ಬೆಂಗಳೂರು: ಇಲ್ಲಿನ ಮಲೆನಾಡು ಮಿತ್ರ ವೃಂದವು ಮಲೆನಾಡಿನ ಪ್ರಗತಿಗೆ ಉಪಯುಕ್ತವಾಗಬಲ್ಲ ಕಾರ್ಯಕ್ರಮವೊಂದನ್ನು ಹಾಕಿದೆ. ಅದೆಂದರೆ, "ಮಲೆನಾಡಿನಲ್ಲಿ ಸಣ್ಣ ಕೈಗಾರಿಕೆಗಳು" ಎಂಬ ವಿಷಯದ ಬಗ್ಗೆ ಕನ್ನಡದಲ್ಲಿ ಪ್ರಬಂಧ ಸ್ಪರ್ಧೆಯೊಂದನ್ನು ಏರ್ಪಡಿಸಿದೆ. ಪ್ರವೇಶ ಉಚಿತ. ಪ್ರಬಂಧ 4 ಪುಟಗಳಿಗೆ ಮೀರಬಾರದು. ಪ್ರಬಂಧವನ್ನು ಅಧ್ಯಕ್ಷರು, ಮಲೆನಾಡು ಮಿತ್ರವೃಂದ(ರಿ), ಗಣೇಶಮಹಲ್, ರೂಮ್ ನಂ. 71, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-3, ಈ ವಿಳಾಸಕ್ಕೆ ಕಳಿಸಬೇಕು. ಕಡೇ ದಿನಾಂಕ 30-6-85.

ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಸೂಕ್ತ ಬಹುಮಾನವಿದ್ದು, ಅವರ ಪ್ರಬಂಧವನ್ನು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು.

ರಾಜ್ಯ ಯುವಜನ ಮೇಳದಲ್ಲಿ ಕೊಪ್ಪ ತಾಲ್ಲೂಕಿಗೆ ಮೂರು ಪ್ರಶಸ್ತಿ

ಅಗಳಗಂಡಿ: ಈಚೆಗೆ ಶಿರಸಿಯಲ್ಲಿ ನಡೆದ ರಾಜ್ಯ ಯುವ ಮೇಳದಲ್ಲಿ ಈ ತಾಲ್ಲೂಕಿನ ಅರೆಹಳ್ಳದ ಶಾರದಾ ಕಲಾ ಸಂಘದ ಭಲೇ ಗೋಡು ನಾಗೇಶ್ ಚರ್ಚಾಸ್ಪರ್ಧೆಯಲ್ಲಿ ಮೊದಲ ಸ್ಥಾನವನ್ನು ಪಡೆದಿದ್ದಾರೆ. ಅದೇ ಸಂಘದ ಕು॥ ಕೆ. ಎನ್. ವಿಜಯ ಲಾವಣಿಯಲ್ಲಿ 2ನೇ ಸ್ಥಾನವನ್ನೂ, ಬಾಳಗಡಿಯ ಕು॥ ಶಶಿಪ್ರಭ ಏಕಪಾತ್ರಾಭಿನಯದಲ್ಲಿ ಮೊದಲ ಸ್ಥಾನವನ್ನೂ ಗಳಿಸಿ ಪ್ರಶಸ್ತಿಗಳನ್ನು ಉಳಿಸಿಕೊಂಡಿದ್ದಾರೆ.

ನಮ್ಮ ಜಿಲ್ಲೆಯಲ್ಲಿ ಬೇರಾವುದೇ ತಾಲ್ಲೂಕಿಗೂ ಒಂದಕ್ಕಿಂತ ಹೆಚ್ಚು ಪ್ರಶಸ್ತಿ ಬಂದಿಲ್ಲದಿದ್ದು ಇವರುಗಳ ಸಾಧನೆ ಹೆಮ್ಮೆಪಡುವಂಥದಾಗಿದೆ.

ಬ್ಯಾಡ್ಮಿಂಟನ್ ಪಂದ್ಯಾವಳಿ

ಅಗಳಗಂಡಿಯ ವಿನಾಯಕ ಬಾಲ್ ಬ್ಯಾಡ್ಮಿಂಟನ್ ತಂಡದ ಆಶ್ರಯದಲ್ಲಿ ಈಚೆಗೆ ನಡೆದ ಪಂದ್ಯಾವಳಿಯಲ್ಲಿ 12 ತಂಡಗಳು ಭಾಗವಹಿಸಿದ್ದು, ಬಾಳೆಹೊನ್ನೂರಿನ ಇಟ್ಟಿಗೆ ತಂಡವು ಅಗಳಗಂಡಿ 'ಎ' ತಂಡವನ್ನು ನೇರ ಆಟಗಳಿಂದ ಸೋಲಿಸಿ ಪ್ರಶಸ್ತಿ ಗೆದ್ದುಕೊಂಡಿತು. (ವರದಿ: ಕಲಬಿ ಶ್ರೀನಿವಾಸ್)

ಹಳದಿ ಎಲೆ ರೋಗಪೀಡಿತ ತೋಟಗಳಲ್ಲೇ ಸಂಶೋಧನೆ ಏರ್ಪಡಿಸಲು ಎಂಪಿಗೆ ಮನವಿ

ಕೊಪ್ಪ: ಸುಮಾರು 35 ವರ್ಷಗಳ ಸಂಶೋಧನೆಯ ನಂತರವೂ ಇನ್ನೂ ಪರಿಹಾರ ಕಾಣದಿರುವ ಅಡಿಕೆಯ ಹಳದಿ ಎಲೆ ರೋಗದ ಬಗ್ಗೆ ಅಂಥ ತೋಟಗಳಲ್ಲೇ ತಜ್ಞರಿಂದ ಸಂಶೋಧನೆಗೆ ಏರ್ಪಾಡು ಮಾಡಲು ಸರ್ಕಾರವನ್ನು ಒತ್ತಾಯಿಸಬೇಕೆಂದು ಸಂಸತ್ ಸದಸ್ಯೆ ತಾರಾದೇವಿಗೆ ಇಲ್ಲಿ ಮನವಿ ಮಾಡಲಾಯಿತು.

ಜೂನ್ 2ರಂದು ಅವರು ಇಲ್ಲಿಗೆ ಭೇಟಿ ನೀಡಿದ್ದಾಗ ಈ ಮನವಿ ಮಾಡಿದ ಕಾಂಗ್ರೆಸ್ ಕಾರ್ಯಕರ್ತರು, ಅಡಿಕೆಗೆ ಪ್ರತ್ಯೇಕ ಬೋರ್ಡ್ ಸ್ಥಾಪಿಸುವ ಬದಲು ಅಡಿಕೆ ಬೆಳೆ ಮತ್ತು ಬೆಳೆಗಾರರ ಹಿತಾಸಕ್ತಿಯ ಬಗ್ಗೆ ಸರಿಯಾದ ಯೋಜನೆಗಳನ್ನು ಹೊಂದಿರುವ 'ಕ್ಯಾಂಪ್ಕೊ' ಸಂಸ್ಥೆಗೇ ಎಲ್ಲ ನೆರವು-ಸೌಕರ್ಯಗಳನ್ನೂ ಒದಗಿಸಬೇಕೆಂದೂ ಸೂಚಿಸಿದರು.

ತಾರಾದೇವಿ ಅಂದು ದೇವನ್ ಎಸ್ಟೇಟ್‌ನಲ್ಲಿ ಐ.ಎನ್.ಟಿ.ಯು.ಸಿ. (ಕಾಂಗ್ರೆಯ ಕಾರ್ಮಿಕ ಸಂಘಟನೆ) ಕಾರ್ಮಿಕರ ಸಭೆಯನ್ನುದ್ದೇಶಿಸಿ ಮಾತನಾಡಿದರು ಹಾಗೂ ಇಲ್ಲಿ ಪಕ್ಷದ ಕಾರ್ಯಕರ್ತರ ಸಭೆಯಲ್ಲಿ ಭಾಗವಹಿಸಿದ್ದರು. ಅನಂತರ ಬಾಳೆಹೊನ್ನೂರಿನ ಬಳಿಯ ಕಾಫಿ ಸಂಶೋಧನಾ ಕೇಂದ್ರದಲ್ಲಿ ಕೇಂದ್ರೀಯ ಶಾಲೆ ತೆರೆಯಬೇಕೆಂಬ ಮನವಿಯ ಬಗ್ಗೆ ಪರಿಶೀಲಿಸಲು ಅಲ್ಲಿಗೆ ತೆರಳಿದರು.

ಹಗಲಲ್ಲೇ ಗಂಧ ಸಾಗಣೆ?

ಕೊಪ್ಪ: ಮೇಗುಂದಾ ಹೋಬಳಿಯ ಅರೆಹಳ್ಳ-ಹುಲಿಗರಡಿ ಪ್ರದೇಶದಲ್ಲಿ ಒಂದು ಚಿಕ್ಕ ತಂಡ ಗಂಧದ ಕಳ್ಳ ಸಾಗಣೆಯಲ್ಲಿ ತೊಡಗಿರುವುದಾಗಿ ಸುದ್ದಿ. ಈ ಗಂಧ ಹಾಡೇ ಹಗಲು ಕಾರಿನಲ್ಲಿ ರವಾನೆಯಾಗುತ್ತಿದೆ ಎನ್ನಲಾಗಿದೆ. ಅರಣ್ಯ ಇಲಾಖೆಯ ಕಡೆಯಿಂದ ಈ ಕುರಿತು ನಿಜ ಸಂಗತಿ ಇನ್ನೂ ಗೊತ್ತಾಗಬೇಕಷ್ಟೆ.

'ಸಪ್ತಶ್ರೀ' ರಂಗದ ಪ್ರಶಸ್ತಿಗಳ ಕಿರೀಟಕ್ಕೆ ಮತ್ತೊಂದು ಗರಿ

ನ. ರಾ. ಪುರ: ಸಣ್ಣ ಪ್ರಮಾಣದಲ್ಲಿಯಾದರೂ ಉತ್ತಮ ಸಾಂಸ್ಕೃತಿಕ ಚಟುವಟಿಕೆಗಳನ್ನೂ ಸದಭಿರುಚಿಯ ನಾಟಕ ಪ್ರದರ್ಶನಗಳನ್ನೂ ಕೊಡುತ್ತಿರುವ ಇಲ್ಲಿನ 'ಸಪ್ತಶ್ರೀ' ಹವ್ಯಾಸಿ ರಂಗವು ಈಗಾಗಲೇ ರಾಜ್ಯ ಮಟ್ಟದಲ್ಲಿ ತನ್ನ ಅಸ್ತಿತ್ವವನ್ನು ಪ್ರಕಟಿಸುತ್ತ ಹಲವು ಪ್ರಶಸ್ತಿಗಳನ್ನು ಗಳಿಸಿದ್ದು, ಈ ಪ್ರಶಸ್ತಿಗಳ ಕಿರೀಟಕ್ಕೆ ಈಚೆಗೆ ಮತ್ತೊಂದು ಗರಿ ಸೇರಿಸಿಕೊಂಡಿತು.

ರಾಜ್ಯ ಮಟ್ಟದ ನಾಟಕ ಸ್ಪರ್ಧೆಗಳು ನಡೆಯುವ ಹಲವು ಸ್ಥಳಗಳಲ್ಲೊಂದಾದ ಜೋಗದಲ್ಲಿ ಈಚೆಗೆ 'ಸಪ್ತಶ್ರೀ' ಅಭಿನಯಿಸಿದ 'ದಿವ್ಯದರ್ಶನ' ನಾಟಕ ಮೊದಲ ಸ್ಥಾನ ಗಳಿಸಿತು.

ಓದುಗರ ಪತ್ರ

ರಸ್ತೆಗಳ ಪುನರ್ನಾತ: ಒಂದು ಪ್ರತಿಕ್ರಿಯೆ

ಮಾನ್ಯರೆ,

ನಿಮ್ಮ ತಾ॥ 2-6-85ರ ಸಂಚಿಕೆಯಲ್ಲಿ 'ಗಬ್ಬೆದ್ದ ರಸ್ತೆ' ವರದಿ ಓದಿ ನನಗೆನ್ನಿಸಿದ್ದೇನೆಂದರೆ: ಹೀಗೆ ಯಾರಾದರೂ ಬೀದಿ ಚರಂಡಿಗೆ ವಾಸನೆ ಹಬ್ಬಿಸಬಹುದಾದರೆ ಮನೆಗೆ ಕಕ್ಕಸು ಕಟ್ಟಿಸುವ ವಿಷಯದಲ್ಲಿ ಸಹ ಹೀಗೇ ಮಾಡಬಹುದಲ್ಲ? ಅದಕ್ಕಾಗಿ ಐದಾರು ಸಾವಿರ ರೂ. ಯಾಕೆ ಖರ್ಚು ಮಾಡಬೇಕು? ಮುನ್ನೂರೋ ನಾನ್ನೂರೋ ರೂ. ಖರ್ಚು ಮಾಡಿ ಒಂದಷ್ಟು ಪೈಪು ಹಾಕಿಸಿ ಚರಂಡಿಗೆ ಬಿಟ್ಟು ಬಿಡಬಹುದಲ್ಲ?

ಅದಿರಲಿ. ಕೆಲವು ಹೋಟೆಲುಗಳ ಬಳಿ ಸಹ ಬೀದಿ ಹೀಗೇ ಗಬ್ಬು ಹೊಡೆಯುತ್ತದೆ. ಅದು ಮುಖ್ಯವಾಗಿ ಅನ್ನದ ತಿಳಿ ಬಣಗುವುದರಿಂದ ಉಂಟಾಗುವುದಾದ್ದರಿಂದ ಅವರುಗಳು ಕಡೇ ಪಕ್ಷ ಈ ತಿಳಿ ಮುಂತಾದ ತುಂಬಾ ವಾಸನೆ ಹುಟ್ಟಿಸುವ ವರ್ಜ್ಯಗಳ ಮಟ್ಟಿಗಾದರೂ ಒಂದು ಪ್ರತ್ಯೇಕ ಮುಚ್ಚಿದ ಹೊಂಡವನ್ನು (ಕಕ್ಕಸಿನ ಹೊಂಡದ ಹಾಗೆ) ಮಾಡಿಕೊಳ್ಳುವುದರಿಂದ ಈ ಸಮಸ್ಯೆಯನ್ನು ಬಹುಪಾಲು ನಿವಾರಿಸಬಹುದೆಂದು ನನ್ನ ಸಲಹೆ. —ಒಬ್ಬ ನಾಗರಿಕ, ಕೊಪ್ಪ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್; ಅಚ್ಚು: ದೀವಟಿಗೆ ಅಚ್ಚುಕೂಟ, ಕೊಪ್ಪ.

ಕಲ್ಕೆರೆ ಹೊಸ ಸೇತುವೆಯಿಂದ ನೀರು ಕಾಲುವೆಗೆ ಧಕ್ಕೆ: ಬದಲಿ ವ್ಯವಸ್ಥೆಗೆ ಅಧಿಕಾರಿಗಳ ಒಪ್ಪಿಗೆ

ಕೊಪ್ಪ: ಈ ತಾಲ್ಲೂಕಿನ ಕಲ್ಕೆರೆಯಲ್ಲಿ ಕಲ್ಕೆರೆ–ಹೆರಟೆಗದ್ದೆ ರಸ್ತೆಯಲ್ಲಿ ನಿರ್ಮಿಸುತ್ತಿರುವ ಸೇತುವೆಯಿಂದಾಗಿ ಆ ಜಾಗದಲ್ಲಿ ಅನಾದಿಯಿಂದ ಇದ್ದ ಹಳ್ಳದ ಕಟ್ಟು ಮತ್ತು ನೀರು ಕಾಲುವೆ ನಾಶವಾಗಿದ್ದು, ಸ್ವಲ್ಪ ಮಾರ್ಪಾಡಿನೊಂದಿಗೆ ಅದನ್ನು ಪುನರ್ನಿರ್ಮಿಸಿ ಕೊಡಲು ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಒಪ್ಪಿಕೊಂಡಿದ್ದಾರೆಂದು ತಿಳಿದುಬಂದಿದೆ.

ಶತಮಾನಕ್ಕೂ ಹಿಂದಿನ ಕಾಲುವೆ

ಈ ಕಟ್ಟು–ಕಾಲುವೆಗಳ ನೆರವಿನಿಂದ 28 ಕುಟುಂಬಗಳಿಗೆ ಸೇರಿದ ಸುಮಾರು 50-60 ಎಕರೆ ಜಮೀನು ಸಾಗುವಳಿ ಆಗಬೇಕಾಗಿದೆ. ಈ ಪೈಕಿ ಬಹಳ ಜನ ಸಣ್ಣ ರೈತರು. ಈ ಕಟ್ಟು–ಕಾಲುವೆ 1910 ರಷ್ಟು ಹಿಂದಿನ ನಕಾಶೆಯಲ್ಲೂ ಸಹ ಕಂಡಿದ್ದು, 100 ವರ್ಷಕ್ಕೂ ಹಿಂದೆ ಕಲ್ಕೆರೆ ಮುಖ್ಯ ರಸ್ತೆಯಲ್ಲಿ ಸೇತುವೆ ಆದಾಗಲೂ ಅದರಲ್ಲಿ ಈ ಕಾಲುವೆ ನೀರಿಗೆ ಪ್ರತ್ಯೇಕ ಮೋರಿಯನ್ನು ರಚಿಸಲಾಗಿದೆ. ಈ ನೀರಿಲ್ಲದೆ ಇದಿಷ್ಟು ಜಮೀನಿನಲ್ಲಿ ಒಂದು ಬೆಳೆ ಸಹ ತೆಗೆಯಲಾಗುವುದಿಲ್ಲ.

ಸೇತುವೆಗಾಗಿ ಕಟ್ಟಿನ ಜಾಗವನ್ನು 5 ಅಡಿಯಷ್ಟು ತಗ್ಗಿಸಿದ್ದು, ಕಾಲುವೆ ತುಂಡಾಗಿದೆ. ಅಲ್ಲದೆ, ಸಮೀಪದ ಕೋಣೆಮಕ್ಕಿ ಹಳ್ಳದ ಕಟ್ಟಿನಿಂದಲೂ ಈ ಕಟ್ಟಿಗೆ ಒಂದು ಪಾಲು ನೀರು ಬರುತ್ತಿದ್ದು, ಆ ಕಾಲುವೆ ಸಹ ಮುಚ್ಚಿದೆ.

ಬದಲಿ ವ್ಯವಸ್ಥೆ

ಸೇತುವೆ ಕಟ್ಟುವುದಕ್ಕಾಗಿ ಈಗ ಹಾಕಿಕೊಂಡಿರುವ ಕಟ್ಟನ್ನೇ ಸದ್ಯಕ್ಕೆ ಉಳಿಸಿಕೊಂಡು, ಮೇಲ್ಗಡೆಯ ತೋಟದ ಮೂಲಕ ಒಂದು ಪೈಪು ಹಾಕಿ ನೀರನ್ನು ಕಾಲುವೆಗೆ ತರುವುದು; ಮಳೆ ಕಮ್ಮಿಯಾದೊಡನೆ ಸೇತುವೆಯಿಂದ ಸುಮಾರು 15 ಅಡಿ ಮೇಲ್ಭಾಗಕ್ಕೆ ಕಾಲುವೆ ಮಟ್ಟಕ್ಕೆ ಸರಿಯಾಗಿ ಸಿಮೆಂಟಿನ ಕಟ್ಟೆ ಕಟ್ಟಿಸಿ, ಕಟ್ಟು ಹಾಕಲು ವ್ಯವಸ್ಥೆ ಮಾಡಿಕೊಡುವುದು ಹಾಗೂ ಪೈಪಿನ ಬದಲು ಶಾಶ್ವತ ಸಿಮೆಂಟ್ ಕಾಲುವೆ ಕಟ್ಟಿಸಿಕೊಡುವುದು; ಕೋಣೆಮಕ್ಕಿ ಹಳ್ಳದ ನೀರು ಈ ಕಟ್ಟಿಗೆ ಬರಲು ಒಂದು ಪೈಪ್ ಮೂಲಕ ವ್ಯವಸ್ಥೆ ಮಾಡುವುದು— ಈ ವ್ಯವಸ್ಥೆಗೆ ಈಗ ಅಧಿಕಾರಿಗಳು ಒಪ್ಪಿಕೊಂಡಿದ್ದಾರೆ.

ಮಂತ್ರಿ ಗೋವಿಂದ ಗೌಡರ ಮುತುವರ್ಜಿ ಮತ್ತು ನಿರ್ದೇಶನದಂತೆ ಈ ಒಪ್ಪಂದ ಏರ್ಪಟ್ಟಿದ್ದು, ರೈತರು ಗೋವಿಂದ ಗೌಡರಿಗೆ ಮೆಚ್ಚುಗೆ ಮತ್ತು ಕೃತಜ್ಞತೆ ಸಲ್ಲಿಸಿದ್ದಾರೆ.

ಹಳದಿ ಎಲೆ ರೋಗಪೀಡಿತ ತೋಟಗಳಲ್ಲೇ ಸಂಶೋಧನೆ ಏರ್ಪಡಿಸಲು ಎಂಪಿಗೆ ಮನವಿ

ಕೊಪ್ಪ: ಸುಮಾರು 35 ವರ್ಷಗಳ ಸಂಶೋಧನೆಯ ನಂತರವೂ ಇನ್ನೂ ಪರಿಹಾರ ಕಾಣದಿರುವ ಅಡಿಕೆಯ ಹಳದಿ ಎಲೆ ರೋಗದ ಬಗ್ಗೆ ಅಂಥ ತೋಟಗಳಲ್ಲೇ ತಜ್ಞರಿಂದ ಸಂಶೋಧನೆಗೆ ಏರ್ಪಾಡು ಮಾಡಲು ಸರ್ಕಾರವನ್ನು ಒತ್ತಾಯಿಸಬೇಕೆಂದು ಸಂಸತ್ ಸದಸ್ಯೆ ತಾರಾದೇವಿಗೆ ಇಲ್ಲಿ ಮನವಿ ಮಾಡಲಾಯಿತು.

ಜೂನ್ 2ರಂದು ಅವರು ಇಲ್ಲಿಗೆ ಭೇಟಿ ನೀಡಿದ್ದಾಗ ಈ ಮನವಿ ಮಾಡಿದ ಕಾಂಗ್ರೆಸ್ ಕಾರ್ಯಕರ್ತರು, ಅಡಿಕೆಗೆ ಪ್ರತ್ಯೇಕ ಬೋರ್ಡ್ ಸ್ಥಾಪಿಸುವ ಬದಲು ಅಡಿಕೆ ಬೆಳೆ ಮತ್ತು ಬೆಳೆಗಾರರ ಹಿತಾಸಕ್ತಿಯ ಬಗ್ಗೆ ಸರಿಯಾದ ಯೋಜನೆಗಳನ್ನು ಹೊಂದಿರುವ 'ಕ್ಯಾಂಪ್ಕೋ' ಸಂಸ್ಥೆಗೇ ಎಲ್ಲ ನೆರವು-ಸೌಕರ್ಯಗಳನ್ನೂ ಒದಗಿಸಬೇಕೆಂದೂ ಸೂಚಿಸಿದರು.

ತಾರಾದೇವಿ ಅಂದು ದೇವನ್ ಎಸ್ಟೇಟ್‌ನಲ್ಲಿ ಐ.ಎನ್.ಟಿ.ಯು.ಸಿ. (ಕಾಂಗ್ರೆಯ ಕಲೆವಿರ್ಕ ಸಂಘಟನೆ) ಕಾರ್ಮಿಕರ ಸಭೆಯನ್ನುದ್ದೇಶಿಸಿ ಮಾತನಾಡಿದರು ಹಾಗೂ ಇಲ್ಲಿ ಪಕ್ಷದ ಕಾರ್ಯಕರ್ತರ ಸಭೆಯಲ್ಲಿ ಭಾಗವಹಿಸಿದ್ದರು. ಅನಂತರ ಬಾಳೆಹೊನ್ನೂರಿನ ಬಳಿಯ ಕಾಫಿ ಸಂಶೋಧನಾ ಕೇಂದ್ರದಲ್ಲಿ ಕೇಂದ್ರೀಯ ಶಾಲೆ ತೆರೆಯಬೇಕೆಂಬ ಮನವಿಯ ಬಗ್ಗೆ ಪರಿಶೀಲಿಸಲು ಅಲ್ಲಿಗೆ ತೆರಳಿದರು.

'ಸಪ್ತಶ್ರೀ' ರಂಗದ ಪ್ರಶಸ್ತಿಗಳ ಕಿರೀಟಕ್ಕೆ ಮತ್ತೊಂದು ಗರಿ

ನ. ರಾ. ಪುರ: ಸಣ್ಣ ಪ್ರಮಾಣದಲ್ಲಿಯಾದರೂ ಉತ್ತಮ ಸಾಂಸ್ಕೃತಿಕ ಚಟುವಟಿಕೆಗಳನ್ನೂ ಸದಭಿರುಚಿಯ ನಾಟಕ ಪ್ರದರ್ಶನಗಳನ್ನೂ ಕೊಡುತ್ತಿರುವ ಇಲ್ಲಿನ 'ಸಪ್ತಶ್ರೀ' ಹವ್ಯಾಸಿ ರಂಗವು ಈಗಾಗಲೇ ರಾಜ್ಯ ಮಟ್ಟದಲ್ಲಿ ತನ್ನ ಅಸ್ತಿತ್ವವನ್ನು ಪ್ರಕಟಿಸುತ್ತ ಹಲವು ಪ್ರಶಸ್ತಿಗಳನ್ನು ಗಳಿಸಿದ್ದು, ಈ ಪ್ರಶಸ್ತಿಗಳ ಕಿರೀಟಕ್ಕೆ ಈಚೆಗೆ ಮತ್ತೊಂದು ಗರಿ ಸೇರಿಸಿಕೊಂಡಿತು.

ರಾಜ್ಯ ಮಟ್ಟದ ನಾಟಕ ಸ್ಪರ್ಧೆಗಳು ನಡೆಯುವ ಹಲವು ಸ್ಥಳಗಳಲ್ಲೊಂದಾದ ಜೋಗದಲ್ಲಿ ಈಚೆಗೆ 'ಸಪ್ತಶ್ರೀ' ಅಭಿನಯಿಸಿದ 'ದಿವ್ಯದರ್ಶನ' ನಾಟಕ ಮೊದಲ ಸ್ಥಾನ ಗಳಿಸಿತು.

ಮಲೆನಾಡಲ್ಲಿ ಸಣ್ಣ ಕೈಗಾರಿಕೆ ಬಗ್ಗೆ ಪ್ರಬಂಧ ಸ್ಪರ್ಧೆ

ಬೆಂಗಳೂರು: ಇಲ್ಲಿನ 'ಮಲೆನಾಡು ಮಿತ್ರ ವೃಂದ'ವು ಮಲೆನಾಡಿನ ಪ್ರಗತಿಗೆ ಉಪಯುಕ್ತವಾಗಬಲ್ಲ ಕಾರ್ಯಕ್ರಮವೊಂದನ್ನು ಹಾಕಿದೆ. ಅದೆಂದರೆ, "ಮಲೆನಾಡಿನಲ್ಲಿ ಸಣ್ಣ ಕೈಗಾರಿಕೆಗಳು" ಎಂಬ ವಿಷಯದ ಬಗ್ಗೆ ಕನ್ನಡದಲ್ಲಿ ಪ್ರಬಂಧ ಸ್ಪರ್ಧೆಯೊಂದನ್ನು ಏರ್ಪಡಿಸಿದೆ. ಪ್ರವೇಶ ಉಚಿತ. ಪ್ರಬಂಧ 4 ಪುಟಗಳಿಗೆ ಮೀರಬಾರದು. ಪ್ರಬಂಧವನ್ನು ಅಧ್ಯಕ್ಷರು, ಮಲೆನಾಡು ಮಿತ್ರವೃಂದ(ರಿ), ಗಣೇಶಮಹಲ್, ರೂಮ್ ನಂ. 71, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–3, ಈ ವಿಳಾಸಕ್ಕೆ ಕಳಿಸಬೇಕು. ಕಡೇ ದಿನಾಂಕ 30–6–85.

ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಸೂಕ್ತ ಬಹುಮಾನವಿದ್ದು, ಅವರ ಪ್ರಬಂಧವನ್ನು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು.

ರಾಜ್ಯ ಯುವಜನ ಮೇಳದಲ್ಲಿ ಕೊಪ್ಪ ತಾಲ್ಲೂಕಿಗೆ ಮೂರು ಪ್ರಶಸ್ತಿ

ಅಗಳಗಂಡಿ: ಈಚೆಗೆ ಶಿರಸಿಯಲ್ಲಿ ನಡೆದ ರಾಜ್ಯ ಯುವ ಮೇಳದಲ್ಲಿ ಈ ತಾಲ್ಲೂಕಿನ ಅರೆಹಳ್ಳದ ಶಾರದಾ ಕಲಾ ಸಂಘದ ಭಲೇಗೋಡು ನಾಗೇಶ್ ಚರ್ಚಾಸ್ಪರ್ಧೆಯಲ್ಲಿ ಮೊದಲ ಸ್ಥಾನವನ್ನು ಪಡೆದಿದ್ದಾರೆ. ಅದೇ ಸಂಘದ ಕು|| ಕೆ. ಎನ್. ವಿಜಯ ಲಾವಣಿಯಲ್ಲಿ 2ನೇ ಸ್ಥಾನವನ್ನೂ, ಬಾಳಗಡಿಯ ಕು|| ಶಶಿಪ್ರಭೆ ಏಕಪಾತ್ರಾಭಿನಯದಲ್ಲಿ ಮೊದಲ ಸ್ಥಾನವನ್ನೂ ಗಳಿಸಿ ಪ್ರಶಸ್ತಿಗಳನ್ನು ಉಳಿಸಿಕೊಂಡಿದ್ದಾರೆ.

ನಮ್ಮ ಜಿಲ್ಲೆಯಲ್ಲಿ ಬೇರಾವುದೇ ತಾಲ್ಲೂಕಿಗೂ ಒಂದಕ್ಕಿಂತ ಹೆಚ್ಚು ಪ್ರಶಸ್ತಿ ಬಂದಿಲ್ಲದಿದ್ದು ಇವರುಗಳ ಸಾಧನೆ ಹೆಮ್ಮೆಪಡುವಂಥದಾಗಿದೆ.

ಬ್ಯಾಡ್ಮಿಂಟನ್ ಪಂದ್ಯಾವಳಿ

ಅಗಳಗಂಡಿಯ ವಿನಾಯಕ ಬಾಲ್ ಬ್ಯಾಡ್ಮಿಂಟನ್ ತಂಡದ ಆಶ್ರಯದಲ್ಲಿ ಈಚೆಗೆ ನಡೆದ ಪಂದ್ಯಾವಳಿಯಲ್ಲಿ 12 ತಂಡಗಳು ಭಾಗವಹಿಸಿದ್ದು, ಬಾಳೆಹೊನ್ನೂರಿನ ಇಟ್ಟಿಗೆ ತಂಡವು ಅಗಳಗಂಡಿ 'ಎ' ತಂಡವನ್ನು ನೇರ ಆಟಗಳಿಂದ ಸೋಲಿಸಿ ಪ್ರಶಸ್ತಿ ಗೆದ್ದುಕೊಂಡಿತು. (ವರದಿ: ಕಲಬಿ ಶ್ರೀನಿವಾಸ್)

ಹಗಲಲ್ಲೇ ಗಂಧ ಸಾಗಣೆ?

ಕೊಪ್ಪ: ಮೇಗುಂದಾ ಹೋಬಳಿಯ ಅರೆಹಳ್ಳ–ಹುಲಿಗರಡಿ ಪ್ರದೇಶದಲ್ಲಿ ಒಂದು ಚಿಕ್ಕ ತಂಡ ಗಂಧದ ಕಳ್ಳ ಸಾಗಣೆಯಲ್ಲಿ ತೊಡಗಿರುವುದಾಗಿ ಸುದ್ದಿ. ಈ ಗಂಧ ಹಾಡೇ ಹಗಲು ಕಾರಿನಲ್ಲಿ ರವಾನೆಯಾಗುತ್ತಿದೆ ಎನ್ನಲಾಗಿದೆ. ಅರಣ್ಯ ಇಲಾಖೆಯ ಕಡೆಯಿಂದ ಈ ಕುರಿತು ನಿಜ ಸಂಗತಿ ಇನ್ನೂ ಗೊತ್ತಾಗಬೇಕಷ್ಟೆ.

ಓದುಗರ ಪತ್ರ

ರಸ್ತೆಗಳ ಪುನರ್ಾತ: ಒಂದು ಪ್ರತಿಕ್ರಿಯೆ

ಮಾನ್ಯರೆ,

ನಿಮ್ಮ ತಾ|| 2–6–85ರ ಸಂಚಿಕೆಯಲ್ಲಿ 'ಗಬ್ಬೆದ್ದ ರಸ್ತೆ' ವರದಿ ಓದಿ ನನಗೆನ್ನಿಸಿದ್ದೇನೆಂದರೆ: ಹೀಗೆ ಯಾರಾದರೂ ಬೀದಿ ಚರಂಡಿಗೆ ವಾಸನೆ ಹಬ್ಬಿಸಬಹುದಾದರೆ ಮನೆಗೆ ಕಕ್ಕಸು ಕಟ್ಟಿಸುವ ವಿಷಯದಲ್ಲಿ ಸಹ ಹೀಗೇ ಮಾಡಬಹುದಲ್ಲ? ಅದಕ್ಕಾಗಿ ಐದಾರು ಸಾವಿರ ರೂ. ಯಾಕೆ ಖರ್ಚು ಮಾಡಬೇಕು? ಮುನ್ನೂರೋ ನಾನ್ನೂರೋ ರೂ. ಖರ್ಚು ಮಾಡಿ ಒಂದಷ್ಟು ಪೈಪು ಹಾಕಿಸಿ ಚರಂಡಿಗೆ ಬಿಟ್ಟು ಬಿಡಬಹುದಲ್ಲ?

ಆದಿರಲಿ. ಕೆಲವು ಹೋಟೆಲುಗಳ ಬಳಿ ಸಹ ಬೀದಿ ಹೀಗೇ ಗಬ್ಬು ಹೊಡೆಯುತ್ತದೆ ಅದು ಮುಖ್ಯವಾಗಿ ಅನ್ನದ ತಿಳಿ ಬಣಗುವುದರಿಂದ ಉಂಟಾಗುವುದಾದ್ದರಿಂದ ಅವರುಗಳು ಕಡೇ ಪಕ್ಷ ಈ ತಿಳಿ ಮುಂತಾದ ತುಂಬಾ ವಾಸನೆ ಹುಟ್ಟಿಸುವ ವರ್ಜ್ಯಗಳ ಮಟ್ಟಿಗಾದರೂ ಒಂದು ಪ್ರತ್ಯೇಕ ಮುಚ್ಚಿದ ಹೊಂಡವನ್ನು (ಕಕ್ಕಸಿನ ಹೊಂಡದ ಹಾಗೆ) ಮಾಡಿಕೊಳ್ಳುವುದರಿಂದ ಈ ಸಮಸ್ಯೆಯನ್ನು ಬಹುಪಾಲು ನಿವಾರಿಸಬಹುದೆಂದು ನನ್ನ ಸಲಹೆ.

—ಒಬ್ಬ ನಾಗರಿಕ, ಕೊಪ್ಪ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್; ಅಚ್ಚು: ದೀವಟಿಗೆ ಅಚ್ಚುಕೂಟ, ಕೊಪ್ಪ.